ಕರ್ನಾಟಕ ಸರ್ಕಾರ

ಸಂಖ್ಯೆ: ಎಸ್‌ಡಬ್ಲ್ಯುಎಲ್ 147 ಎಸ್ಎಡಿ 84

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ -8-1984.

## ಸುತ್ತೋಲೆ

ಕ್ರಮಸಂಖ್ಯೆ ಎಸ್‌ಡಬ್ಲ್ಯುಎಲ್ 289 ಎಸ್ಎಡಿ 82 ದಿನಾಂಕ 28-10-83ರ ಸುತ್ತೋಲೆಯಲ್ಲಿ 'ಹರಿಜನ' 'ಗಿರಿಜನ' ಎಂಬ ಪದಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬದಲು ಉಪಯೋಗಿಸುವುದನ್ನು ನಿಷೇಧಿಸಿ ತಿಳುವಳಿಕೆ ನೀಡಲಾಗಿರುವುದು ಸರಿಯಷ್ಟೆ. ಇದು ಜಾತಿ ಪ್ರಮಾಣ ಪತ್ರಕ್ಕೆ ಹಾಗೂ ವಿದ್ಯಾಭ್ಯಾಸ ಇಲಾಖೆಯ ನೋಂದಣಿ ಪುಸ್ತಕಗಳಿಗೆ (ರಿಜಿಸ್ಟರ್) ಸಂಬಂಧಿಸಿದಂತೆ ಹೊರಡಿಸಲಾಗಿತ್ತು. 'ಷೆಡ್ಯೂಲ್ಡ್ ಕ್ಯಾಸ್ಟ್' 'ಷೆಡ್ಯೂಲ್ಡ್ ಟ್ರೈಬ್ಸ್' ಪದಗಳಿಗೆ ಕನ್ನಡ ಪದಗಳನ್ನು ನಿಗದಿಗೊಳಿಸುವ ದಿಶೆಯಲ್ಲಿ ಸರ್ಕಾರವು ಆಲೋಚನೆಯಲ್ಲಿದ್ದು ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

'ಷೆಡ್ಯೂಲ್ಡ್ ಕ್ಯಾಸ್ಟ್' ಪದಕ್ಕೆ 'ಪರಿಶಿಷ್ಟ ಜಾತಿ' ಮತ್ತು 'ಷೆಡ್ಯೂಲ್ಡ್ ಟ್ರೈಬ್ಸ್' ಪದಕ್ಕೆ 'ಪರಿಶಿಷ್ಟ ಪಂಗಡ' ಎಂಬ ಪದಗಳು ಬಳಕೆಯಲ್ಲಿ ಇವೆ. ಇದರೊಂದಿಗೆ 'ಅನುಸೂಚಿತ ಜಾತಿ' ಮತ್ತು 'ಅನುಸೂಚಿತ ಪಂಗಡ' ಎಂಬ ಪದಗಳೂ ಬಳಕೆಯಲ್ಲಿ ಇವೆ. 'ಷೆಡ್ಯೂಲ್ಡ್ ಟ್ರೈಬ್ಸ್' ಪದಕ್ಕೆ 'ಅನುಸೂಚಿತ ಬುಡಕಟ್ಟು' ಎಂಬ ಪದವನ್ನು ಸಹ ಬಳಸಲಾಗುತ್ತಿದೆ. ಈ ಎಲ್ಲಾ ಪದಗಳು ಪ್ರಾಮಾಣಿಕ ಪದಗಳಾಗಿರುತ್ತವೆ. ಆದರೂ ಸರ್ಕಾರದಿಂದ ಅಂಗೀಕೃತವಾದ ಹಾಗೂ ಅಧಿಕೃತವಾದ ಪದಗಳನ್ನು ನಿಗದಿ ಪಡಿಸುವ ಅಗತ್ಯ ತೋರಿರುವುದರಿಂದ ಇನ್ನು ಮುಂದೆ 'ಷೆಡ್ಯೂಲ್ಡ್ ಕ್ಯಾಸ್ಟ್' ಮತ್ತು 'ಷೆಡ್ಯೂಲ್ಡ್ ಟ್ರೈಬ್ಸ್' ಎಂಬ ಆಂಗ್ಲ ಪದಗಳಿಗೆ ಸರಿ ಸಮಾನವಾಗಿ 'ಅನುಸೂಚಿತ ಜಾತಿ' ಮತ್ತು 'ಅನುಸೂಚಿತ ಬುಡಕಟ್ಟು' ಹಾಗೂ 'ಪರಿಶಿಷ್ಟ ಜಾತಿ' ಮತ್ತು 'ಪರಿಶಿಷ್ಟ ಪಂಗಡ' ಎಂಬ ಶಬ್ದಗಳನ್ನು ಮಾತ್ರ ಉಪಯೋಗಿಸಬೇಕೆಂದು ಸೂಚಿಸಲಾಗಿದೆ. ಈ ಸೂಚನೆಯನ್ನು ಇನ್ನು ಮುಂದೆ ಸಂಬಂಧಪಟ್ಟವರೆಲ್ಲಾ ಚಾಚು ತಪ್ಪದೆ ಅನುಷ್ಠಾನಕ್ಕೆ ತರತಕ್ಕದ್ದು.

(ಫಿಲಿಪೋಸ್ ಮಥಾಯ್)
ಸರ್ಕಾರದ ಕಾರ್ಯದರ್ಶಿ
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ಇವರಿಗೆ :

ಸಂಕಲನಕಾರ, ಕರ್ನಾಟಕ ವಿಷಯ ಕೋಶ, ಬೆಂಗಳೂರು, ಕರ್ನಾಟಕ ವಿಷಯ ಕೋಶದಲ್ಲಿ ಪ್ರಕಟಣೆಗಾಗಿ.

ಪ್ರತಿ:

1. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳಿಗೆ
2. ಎಲ್ಲಾ ಇಲಾಖಾ ಮುಖ್ಯಸ್ಥರಿಗೆ
3. ಎಲ್ಲಾ ವಿಭಾಗಾಧಿಕಾರಿಗಳವರಿಗೆ
4. ಎಲ್ಲಾ ಜಿಲ್ಲಾಧಿಕಾರಿಗಳವರಿಗೆ
5. ಸರ್ಕಾರದ ಎಲ್ಲ ಉಪಕಾರ್ಯದರ್ಶಿಗಳಿಗೆ
6. ಸರ್ಕಾರದ ಎಲ್ಲ ಅಧೀನ ಕಾರ್ಯದರ್ಶಿಗಳಿಗೆ
7. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖಾಧಿಕಾರಿಗಳಿಗೆ
8. ಎಲ್ಲಾ ತಾಲ್ಲೂಕಿನ ತಹಸೀಲ್ದಾರರುಗಳಿಗೆ
9. ಎಲ್ಲಾ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ
10. ನಿರ್ದೇಶಕ, ವಾರ್ತಾ ಮತ್ತು ಪ್ರಚಾರ ಇಲಾಖೆ
11. ಶಾಖಾ ರಕ್ಷಾ ಕಡತ